ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

ಸಿ. ಸಿ. ನಂ.185/2018

| | | | |
|---|---|---|---|
| ಸಾಕ್ಷಿಧಾರರ ಹೆಸರು | : | ಕಿರಣ ರಾಯ್ಕರ | ಪಿಡಬ್ಲ್ಯೂ 1 |
| ತಂದೆಃಗಂಡನ ಹೆಸರು | : | ವಿನಾಯಕ | ಸಿಡಬ್ಲ್ಯೂ 1 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಬಂಗಾರದ ಅಂಗಡಿಯಲ್ಲಿ ಕೆಲಸ | |
| ವಾಸಸ್ಥಳ | : | ಹಾನಗಲ್ | |

ದಿನಾಂಕ 27-09-2023 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾ ಸಾ 4 ಮತ್ತು 5 ನನ್ನ ಮಾವಂದಿರು. 1 ನೇ ಆರೋಪಿಯನ್ನು ನಾನು ನೋಡಿಲ್ಲ, ಆತನ ಹೆಸರು ಕೇಳಿದ್ದೆ. ನಾನು ಚಾ ಸಾ 5 ರವರು ಮನೆಯಲ್ಲಿ ವಾಸ ಇದ್ದೇನೆ, ಹಾಗೂ ಘಟನೆ ನಡೆಯುವ 8 ತಿಂಗಳ ಪೂರ್ವದಿಂದ ಚಾ ಸಾ 4 ರವರ ಆಶಿರ್ವಾದ ಜ್ಯುಯೇಲರ್ಸ ನಲ್ಲಿ ಕೆಲಸ ಮಾಡುತ್ತಿದ್ದೆ. ದಿನಾಂಕ 21-10-2016 ರಂದು ಎಂದಿನಂತೆ ಬೆಳಿಗ್ಗೆ 10-00 ಗಂಟೆಗೆ ಅಂಗಡಿ ತೆರೆಗೆದು ರಾತ್ರಿ 9-30 ಗಂಟೆಗೆ ಅಂಗಡಿ ಮುಚ್ಚಿ ಶಟರ್ ಮತ್ತು ಗ್ರಿಲ್ಸಗೆ ಲಾಕ್ ಮಾಡಿದ್ದೆ. ದಿನಾಂಕ 22-10-2016 ರ ಬೆಳಗಿನ ಜಾವ 3-30 ಗಂಟೆಗೆ ಚಾ ಸಾ 4 ರವರು ನನಗೆ ಕರೆ ಮಾಡಿ ನಮ್ಮ ಅಂಗಡಿಯ ಪಕ್ಕದವರು ನಮ್ಮ ಅಗಡಿಯ ಬಾಗಿಲು ತೆಗೆದಿದೆ ಎಂದು ತನಗೆ ತಿಳಿಸಿದ್ದು ತಕ್ಷಣ ಹೋಗುವಂತೆ ನನಗೆ ಹೇಳಿದರು. ಆ ಪ್ರಕಾರ ನಾನು ಮತ್ತು ಚಾ ಸಾ 5 ರವರು ಅಂಗಡಿಗೆ ಹೋದೆವು. ಹೋಗಿ ನೋಡಿದಾಗ ನಮ್ಮ ಅಂಗಡಿಯ ಬಾಗಿಲು ತೆರೆದಿತ್ತು. ನಾನು ಮತ್ತು ಚಾ ಸಾ 5 ರಿಂದ 7 ರವರು ಅಂಗಡಿಯ ಒಳಗೆ ಹೋಗಿ ನೋಡಿದಾಗ ಸುಮಾರು 6 ಕೆ ಜಿ ಬೆಳ್ಳಿ ಸಾಮಾನುಗಳು, ರೂ.7000-00 ನಗದು ಹಣ, ಒಂದು ಕ್ಯಾಮೆರಾ ಕಳ್ಳತನಾಗಿತ್ತು. ಆ ಬಗ್ಗೆ ಚಾ ಸಾ 4 ರವರು ದೂರು ನೀಡಲು ಹೇಳಿದ ಕಾರಣ ನಾನು ದೂರು ನೀಡಿದ್ದೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿ ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ಸಾಕ್ಷಿ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು

ಸದರಿ ಪಂಚನಾಮೆಯನ್ನು ನಿ ಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ನಕಾಶೆಯನ್ನು ತಯಾರಿಸಿಲ್ಲ. ಸಾಕ್ಷಿ ಒಂದು ಭಾವಚಿತ್ರದಲ್ಲಿ ತನ್ನನ್ನು ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು. ಅದನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ಗೊತ್ತಿಲ್ಲ. ಕುಮಾರಸ್ವಾಮಿ ಲೇಔಟ್ ಪೊಲೀಸರು ನನ್ನನ್ನು ಯಾವತ್ತೂ ಕರೆಯಿಸಿಲ್ಲ, ಅಲ್ಲಿ ನನಗೆ 1 ನೇ ಆರೋಪಿಯನ್ನು ತೋರಿಸಿಲ್ಲ. ಆಭರಣಗಳನ್ನು ತೋರಿಸಿದ್ದಾರೆ. ಅವುಗಳನ್ನು ಬಿಡಿಸಿಕೊಂಡಿದ್ದೇವೆ. ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಈ ಮೇಲಿನ ವಿಷಯದ ಬಗ್ಗೆ ಹೇಳಿಕೆಯನ್ನು ಕೊಟ್ಟಿಲ್ಲ. ನಂತರ ಹಾನಗಲ್ ಪೊಲೀಸ್ ಠಾಣೆಯಲ್ಲಿಯೂ ಸಹ ಯಾವುದೇ ಮರು ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ 22-10-2016 ರಂದು ನನ್ನ ಮತ್ತು ಚಾ ಸಾ 2 ಮತ್ತು 3 ರವರ ಸಮಕ್ಷಮ ನಾನು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ನಿ ಪಿ 2 ರ ಪಂಚನಾಮೆಯನ್ನು ಮಧ್ಯಾಹ್ನ 12-30 ರಿಂದ 1-30 ರವರೆಗೆ ಮಾಡಿ ನಿ ಪಿ 3 ರ ಭಾವಚಿತ್ರವನ್ನು ಮತ್ತು ಇನ್ನೊಂದು ಭಾವಚಿತ್ರವನ್ನು ತೆಗೆದರು ಮತ್ತು ಹಾತ ನಕಾಶೆಯನ್ನು ತಯಾರಿಸಿದರು ಎಂದರೆ ಸರಿಯಲ್ಲ. ನಂತರ ದಿನಾಂಕ 13-6-2017 ರಂದು ನಾನು ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಗೆ ಹಾಜರಾಗಿ 1 ನೇ ಆರೋಪಿಯನ್ನು ಗುರುತಿಸಿ ಬಂಗಾರದ ಒಡವೆಗಳನ್ನು ಗುರುತಿಸಿ ಆ ರೀತಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ ಪಿ 4 ಎಂದು ಗುರುತಿಸಲಾಯಿತು. ದಿನಾಂಕ 28-7-2017 ರಂದು ಹಾನಗಲ್ ಪೊಲೀಸ್ ಠಾಣೆಯಲ್ಲಿ ಬೆಂಗಳೂರಿಗೆ ಹೋಗಿ 1 ನೇ ಆರೋಪಿಯನ್ನು ಮತ್ತು ಒಡವೆಗಳನ್ನು ಗುರುತಿಸಿ ಆಭರಣಗಳನ್ನು ಬಿಡಿಸಿಕೊಂಡ ಬಗ್ಗೆ ಪುನಃ ಹೇಳಿಕೆ ನೀಡಿದ್ದಃನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಪುನಃ ಹೇಳಿಕೆಯನ್ನು ನಿ ಪಿ 5 ಎಂದು ಗುರುತಿಸಲಾಯಿತು. ನನಗೆ ನಿ ಪಿ 2 ರಿಂದ 5 ರ ಬಗ್ಗೆ ಸಂಪೂರ್ಣ

ಮಾಹಿತಿ ಇದ್ದರೂ ಸಹ ಆರೋಪಿತನನ್ನು ಗುರುತಿಸಲು ಆಗುತ್ತಿದ್ದರೂ ಸಹ 1 ನೇ ಆರೋಪಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ.ಆರ್ ಪಿ ಎ ವಕೀಲರಿಂದ

(ಇಲ್ಲ ಎನ್ನುತ್ತಾರೆ )

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್